ದಾಸಯ್ಯ ನಡ ನಡ’ ಅಂದು ಕುಂಡೆ ತಿರ್ಗಿಸಿ ಓಡಿದವು. ಬಿಸಿಲಿಗ ಪ್ರಾಯ ಬರುತ್ಲೇ ವಾನಗಳು ಓಡಾಡೋದು ನಿಂತೋಯ್ತು. ‘ಇದ್ಯಾನ ಇದು ಹಿಂಗಾಯ್ತಲ್ಲ?’ ಅಂತ ಚೋಜುಗ ಪಟ್ಕಂಡು ಅಂಕಪ್ಪ ತಿರ್ಗ ಮರದತವು ಕೂತ್ಬಿಟ್ಟ. ಬಿಸಿಲಿಗ ವಯಸ್ಸಾಗ್ತ ಬಂದ್ರೂ ಒಂದ್ ಕಡ್ಡಿ ಅಲ್ಲಾಡಿಲ್ಲ. ರೋಡು ಕಾಳಮ್ಮಾಯಿ ನಾಲ್ಗ ತರವಾಗಿ ಕಾಣೋ ಹಂಗಾದ್ದೆ ಅಂಕಪ್ಪ ನಡಿಯಾಕ ಸುರು ಮಾಡಿದನು. ಆದ್ರ ಹೊಟ್ಟ ಹಸಿವಿಂದ ನಡಿಯಾದು ಆಗ್ನಿಲ್ಲ. ಯಾವ್ದಾರ ಹಟ್ಟಿ ಕಂಡಿತಾ ಅಂತ ಕೂತೂ ನಡ್ದು ಕೂತೂ ನಡ್ದು ಮಾಡಿದನು. ಏನೂ ಸಿಗ್ನಿಲ್ಲ. ರೋಡ್ ಕೆಲ್ಸ ಮಾಡಾಕ ಬಂದಿದ್ದ ದೊಡ್ಡೊಡ್ಡ ಮಿಷಿನ್ನುಗಳು ದೆಯ್ಯ ಕಂಡಂಗೆ ನಿಂತು ಹೆದರಿಸ್ತಿದ್ದವು.

“ಲೋ ಕೂಸೆ, ಸಾವ್ರಾರು ವರ್ಷದ ಮಳ ಬಿಸ್ಲುಗ ಕರಗಿಲ್ಲ. ಈ ಮನ್ಸ್ರು ಹಾಕಿದ ಡೈನಮೇಟ್ಗ ಸಿಡಿದು ಚೂರಾದ್ರೂ ನನ್ನನ್ನು ಇಡಿಯಾಗಿ ಪುಡಿ ಮಾಡಾಕ ಆಗ್ನಿಲ್ಲ ಮನ್ಸಂಗ. ನಾನಿನ್ನೂ ಹೆಬ್ಬಂಡೆ ಆಗೇ ಉಳ್ದಿನಿಕಣ” ಅಂತ ಮುಗಿಲಿಗ ಚಾಚ್ಕಂಡಂಗಿದ್ದ ಆ ರಾಮನಗರದ ಬೆಟ್ಟ ಅಂಕಪ್ಪನ್ನ ಕರ್ದು ಹೇಳಿದಂಗಾಯ್ತು. ‘ನಾ ಊರಿಗ ಹೋಗ್ಲೇ ಬೇಕು. ಅಪ್ಪ ಅವ್ವನ್ನ ನೋಡ್ಲೇ ಬೇಕು’ ಅಂತ ದುಡವಾಗಿ ನಿಂತನು. ಬೆಳಕರಿಯೋ ಹೊತ್ಗ ಕೆಂಗಲ್ಲು ಹನುಮಂತಪ್ಪನ ಗುಡಿತವು ನಿಂತಿದ್ದನು. ಹತ್ತು ಜಿನದಿಂದ ಮನಸ್ರನ್ನ ನೋಡ್ದಿದ್ದ ಕಪಿಗಳು ಇಂದು ಅಂಕಪ್ಪನ್ನ ನೋಡಿ ಉಸಿರುಬಿಟ್ಟಂಗಿತ್ತು. ಮಿನಿಷ್ಟ್ರು ಬಂದಾಗ ಕಾರ್ಯಕರ್ತರು ಮುತ್ಗತಾರಲ್ಲ ಹಂಗ ನೂರಾರು ಕಪಿಗಳು ಅಂಕಪ್ಪನ ಮುತ್ಗಂಡವು. ಕಪಿಗಳ ಕಣ್ಣ ನೋಟವ ನೋಡಲಾಗದೆ ಅವನು ತಲೆತಗ್ಗಿಸಿದ. ತಿರ್ಗ ನೋಡ್ತನ ಅವ್ವು ಹಂಗೆ ನೋಡ್ತಾ ‘ಅನ್ನ ಕೊಡು ಕೂಸೆ’ ಅಂದಂಗಿತ್ತು. ‘ನಾನೇ ಸತ್ತೋಗೊಂಗವ್ನಿ ನಿಮ್ಗ ಯಾನ್ ಕೊಡ್ಲಿ?’ ಅಂದ್ರ ಕಪಿಗಳು ಒಂದ್ಸಲ ಅಂಕಪ್ಪನ ಬ್ಯಾಗನ್ನ ಚೆಕ್ ಮಾಡಿದವು. ‘ಕಾಡ್ ಕಪಿಗಿಂತ್ಲೂ ವೇಸ್ಟು ಇವ್ನು ಹಣ್ಣು ಪಣ್ಣು ಸಾಯ್ಲಿ, ಒಂದ್ ಪ್ಯಾಕೇಟು ಚಿಪ್ಸು, ಬೆಡ್ಡು ಏನೂ ಮಡ್ಗಿಲ್ಲ ಮೂದೇವಿ’ ಆ ಬ್ಯಾಗ್ನ ತೂದು ಎಸ್ದು ನಡ್ದವು. ಅಂಕಪ್ಪ ಗುಡಿತವು ನೀರು ಕುಡ್ದು ಮನಿಕಂಡನು.



ಬೆಂಗ್ಳೂರು ಸಿಟಿ ಬುಟ್ಟ ಹದಿನಾಕನೇ ಜಿನಕ್ಕ ಅಂಕಪ್ಪ ಶ್ರೀರಂಗಪಟ್ಟಣಕ್ಕ ತಲುಪಿದನು. ತಾಯಿ ಕಾವೇರಿಯಲ್ಲಿ ಮಿಂದು ಹೊಟ್ಟ ತುಂಬ ನೀರು ಕುಡ್ದನು. ಈಗೀಗ ಬೆಳ್ಗನಗ ತೆಗಿತಿದ್ದ ಅಂಗ್ಡಿ ಮುಂದ್ಕ ಸಾಲಲ್ಲಿ ನಿಂತ್ಗಂಡು ಸೌಂತೆಕಾಯಿ ಬ್ರೆಡ್ಡು ತಗ್ದು ಬ್ಯಾಗಲ್ಲಿ ಇಟ್ಕಂಡು ಯಾವ್ದಾರ ನೆರಳಲ್ಲಿ ಮನುಗಿ ಸಂಜಿ ಆಯ್ತಲೆ ನಡಿಯೋದ ರೂಡಿ ಮಾಡಿಕೊಂಡನು. ಇನ್ನೇನು ಮಯ್ಸೂರು ಆಮ್ಯಾಕ್ಕ ನಂಜನಗೂಡು. ಆಮ್ಯಾಕ್ಕ ಅಪ್ಪ ಅವ್ವ. ಅಪ್ಪ ಅವ್ವ ಅನ್ನೋ ಎಚ್ಚರವೇ ಅವನನ್ನ ನಡೆಸ್ತಾ ಇತ್ತು. ಆದರ ನಡ್ದೂ ನಡ್ದೂ ಅಂಗಾಲು ಒಪ್ಪ ಬಂದೋಗಿತ್ತು. ಈಗವು ಒಡ್ದು ರೋಡಿನ ದೂಳು ಕಲ್ಲುಗಳ ದೋಸ್ತಿ ಮಾಡಿಕೊಂಡು ಅವನ ನೆತ್ತಿಗ ಚುಚ್ತಿದ್ದವು. ಆ ನೋವಿಗ ಅಂಕಪ್ಪನ ಸ್ಪೀಡು ಕಡ್ಮೆ ಆಯ್ತು. ಆದ್ರೂವಿ ಹದಿನೆಂಟನೇ ಜಿನಕ್ಕ ಕಡಕೊಳಕ್ಕ ತಲುಪಿದನು. ಅಲ್ಲಿಂದ ಮುಂದ್ಕ ಕೋಟೆ ಕಟ್ಟಿದ್ದರು. ಆ ಮಾ ಮಾರಿ ಪ್ಯಾಕ್ಟರಿಗಳ ಮೂಲಕ ಬಂದು ಇಡೀ ನಂಜನಗೂಡ್ಗ ಬಡ್ಕಂಡಿತ್ತು. ನಂಜನಗೂಡ್ಲ ಹೆಸ್ರು ಕೇಳುದ್ರ ಹೆದ್ರಕಳೋ ಹಂಗ ಮಾಡ್ಬಿಟ್ಟಿದ್ರು ಟಿವಿಗಳು. ಒಂದು ಸೊಳ್ಳೆ ಸುದ ನಂಜನಗೂಡ್ಗ ಹೋಗೊ ಹಾಗಿರ್ನಿಲ್ಲ. ಇನ್ನು ಅಂಕಪ್ಪ ಹೋಗೋದು?

ಸೊಸೈಟಿಲಿ ಕೊಡುವ ಅಕ್ಕಿ ಈಸ್ಗಳಾಕ ಅಂತ ಲಶ್ಮಿ ಹೆಗ್ಡಳ್ಳಿಗ ಹೋಗಿದ್ದಳು. ಬರ್ಬೇಕಾರ ಡಾಗಟ್ರ್ರತಪು ಕ್ರೀಮು ತಗಂಡು ರೋಡಲ್ಲಿ ಬತ್ತಿರ್ಬೇಕಾರ ಕಾವ್ಲಿತವು ಮರಿಗಳು ಕಂಡವು. ಅವುಗಳ ಅಟ್ಕಂಡು ನಾರಾಯ್ಣಿಗ ತೋರಸ್ಬೇಕು ಅಂತ ಬಿರ್ ಬಿರ್ನೆ ಹಟ್ಟಿಗ ಬಂದಳು. ಹದಿನೆಂಟು ಜಿನ ಆದ್ಮೇಲ ಅವರ ಹಟ್ಟಿ ಒಳಕ ಅಕ್ಕಿ ಮತ್ತು ನಾಕ್ ಮರಿಗಳು ಬಂದಿದ್ವು. ‘ಅದೋ… ನೋಡ್ಕ ಮರಿಗಳು ಬಂದವ’ ಕೂಗಿದಳು. ನಾರಾಯ್ಣಿದು ಸೌಂಡಿಲ್ಲ. ನೋಡ್ತಳ ಅವನ ಮೂಗಲ್ಲಿ ಕಿವಿನಲ್ಲಿ ರತ್ತ ಬತ್ತಿತ್ತು.

●